**ಕರ್ನಾಟಕ ಸರ್ಕಾರ**

ಇ-ಮಾಂಕ:ಇಡಿ/60/ಯುಆರ್‌ಸಿ/2026

ಕರ್ನಾಟಕ ಸರ್ಕಾರ ಸಚಿವಾಲಯ,
ಬಹುಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ:04.07.2026

ಇವರಿಂದ,

ಸರ್ಕಾರದ ಕಾರ್ಯದರ್ಶಿ,
ಉನ್ನತ ಶಿಕ್ಷಣ ಇಲಾಖೆ,
ಬಹುಮಹಡಿ ಕಟ್ಟಡ,
ಡಾ. ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು.

ಇವರಿಗೆ,

ಕುಲಸಚಿವರು,
ರೈ ತಾಂತ್ರಿಕ ವಿಶ್ವವಿದ್ಯಾಲಯ,
ಮಲ್ಲೋಹಳ್ಳಿ ಗ್ರಾಮ, 11ನೇ ಮೈಲಿ,
ಕೊಡನೂರು ಅಂಚೆ, ದೊಡ್ಡಬಳ್ಳಾಪುರ,
ಬೆಂಗಳೂರು ಗ್ರಾಮಾಂತರ ಜಿಲ್ಲೆ.

ಮಾನ್ಯರೆ,

ವಿಷಯ:- ರೈ ತಾಂತ್ರಿಕ ವಿಶ್ವವಿದ್ಯಾಲಯದ 2026-27ರ ಶೈಕ್ಷಣಿಕ ಸಾಲಿನಲ್ಲಿ ಹೊಸ ಕೋರ್ಸ್ (Programme) ಗಳು ಪ್ರಾರಂಭಿಸುವ ಕುರಿತು.

ಉಲ್ಲೇಖ:- ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನ ಪತ್ರ ಸಂಖ್ಯೆ:KSHEC/60/RT Uni/2025-26/90 ದಿನಾಂಕ:20.01.2026

-----

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತಿನಿಂದ ರಚಿಸಲಾದ ತಜ್ಞರ ಸಮಿತಿಯು ಮಾಡಿರುವ ಶಿಫಾರಸ್ಸಿನ ಆಧಾರದ ಮೇಲೆ ಯುಜಿಸಿ/ಇತರ ಮಾನ್ಯತಾ ಸಂಸ್ಥೆಗಳ ಮಾನದಂಡಗಳ ಪ್ರಕಾರ ಅಗತ್ಯ ಮೂಲಭೂತ ಸೌಕರ್ಯ ಮತ್ತು ಸಿಬ್ಬಂದಿ ಅವಶ್ಯಕತೆಗಳನ್ನು ಕಡ್ಡಾಯವಾಗಿ ಪೂರೈಸುವ ಮತ್ತು ಸಂಬಂಧಿಸಿದ ರಾಷ್ಟ್ರೀಯ ಅಧಿಮಾನ್ಯತಾ ಸಂಸ್ಥೆಗಳ ಅನುಮೋದನೆಯನ್ನು ಪಡೆಯುವ ಷರತ್ತಿಗೊಳಪಟ್ಟು ರೈ ತಾಂತ್ರಿಕ ವಿಶ್ವವಿದ್ಯಾಲಯದ 2026-27ರ ಶೈಕ್ಷಣಿಕ ಸಾಲಿನಲ್ಲಿ ಹೊಸ ಕೋರ್ಸ್ (Programme) ಗಳು ಪ್ರಾರಂಭಿಸುವ ಕುರಿತು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆಯನ್ನು ನೀಡಿದೆ ಎಂದು ತಿಳಿಸಲು ನಿರ್ದೇಶಿಸಲ್ಪಟ್ಟಿದ್ದೇನೆ.

...2

INTRODUCTION OF NEW COURSES

| Sl.No. | Name of the Program of study | Proposal Intake for 2026-27 | Recommended total intake for 2026-27 | Government Quota 40% | University Quota 60% | Total Proposed Intake for 2026-27 |
|---|---|---|---|---|---|---|
| 1 | B.Tech in Artificial Intelligence & Machine Learning (AIML) | 60 | 60 | 24 | 36 | 60 |
| 2 | B.Tech. in Data Science (DS) | 60 | 60 | 24 | 36 | 60 |

**ಷರತ್ತುಗಳು:-**

(1) ಪ್ರವೇಶಾತಿ, ಬೋಧಕರ ಕಾರ್ಯಭಾರ, ಪಠ್ಯಕ್ರಮ, ಪರೀಕ್ಷೆ ಹಾಗೂ ಮೌಲ್ಯಮಾಪನ, ಭೌತಿಕ ಮೂಲ ಸೌಕರ್ಯಗಳ ಲಭ್ಯತೆ ಮತ್ತು ಪದವಿ ಪ್ರದಾನಗಳಿಗೆ ಸಂಬಂಧಿಸಿದಂತೆ UGC (Minimum Standards Of Instruction for the Grant of the Master's Degree through Formal Education) Regulations, 2003 ರನ್ವಯ ಕಟ್ಟುನಿಟ್ಟಾಗಿ ಕ್ರಮವಹಿಸತಕ್ಕದ್ದು.

2) ಅಧಿನಿಯಮದನುಸಾರವಾಗಿ ವಿಶ್ವವಿದ್ಯಾಲಯದ ಎಲ್ಲಾ ಕೋರ್ಸುಗಳ ಪ್ರವೇಶದಲ್ಲಿ ಶೇಕಡಾ ನಲವತ್ತರಷ್ಟು ಸೀಟುಗಳನ್ನು ಕರ್ನಾಟಕ ರಾಜ್ಯದ ವಿದ್ಯಾರ್ಥಿಗಳಿಗೆ ರಾಜ್ಯ ಸರ್ಕಾರದ ಮೀಸಲಾತಿ ನಿಯಮದಂತೆ, ನೀಡಿರುವ ಬಗೆಗಿನ ಸಂಪೂರ್ಣ ವಿವರ ಹಾಗೂ ಸದರಿ ವಿದ್ಯಾರ್ಥಿಗಳಿಂದ ಸ್ವೀಕರಿಸುತ್ತಿರುವ ಶುಲ್ಕಗಳ ವಿವರ ಹಾಗೂ ಅದರಂತೆ, ಮೀಸಲಾತಿಯಡಿ ದಾಖಲಾಗಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳ ಪೂರ್ಣ ವಿವರಗಳನ್ನು ಸಲ್ಲಿಸತಕ್ಕದ್ದು.

(3) ಅಧಿನಿಯಮದನುಸಾರವಾಗಿ ವಿಶ್ವವಿದ್ಯಾಲಯದ ಎಲ್ಲಾ ಕೋರ್ಸುಗಳ ಪ್ರವೇಶದಲ್ಲಿ ಶೇಕಡಾ ಅರವತ್ತರಷ್ಟು ಸೀಟುಗಳ ಸಂಬಂಧದಲ್ಲಿ ಶುಲ್ಕವನ್ನು ನಿಗದಿಪಡಿಸುವ ವಿಧಾನದ ವಿವರ ಹಾಗೂ ಸದರಿ ವಿದ್ಯಾರ್ಥಿಗಳಿಂದ ಸ್ವೀಕರಿಸುತ್ತಿರುವ ಶುಲ್ಕಗಳ ವಿವರಗಳನ್ನು ಸಲ್ಲಿಸತಕ್ಕದ್ದು.

(4) ವಿದ್ಯಾರ್ಥಿ ಪ್ರಮಾಣವನ್ನು ಹೆಚ್ಚಳ ಮಾಡಲು ಹಾಗೂ ಹೊಸದಾಗಿ ಪ್ರಾರಂಭಿಸಲು ಪ್ರಸ್ತಾಪಿಸಲಾಗಿರುವ ಕೋರ್ಸಿಗೆ ಸಂಬಂಧಪಟ್ಟ ನಿಯಂತ್ರಣ ಪ್ರಾಧಿಕಾರಗಳ ಗುಣಮಟ್ಟ ಮತ್ತು ನಿಗದಿತ ಮಾದರಿಗನುಸಾರವಾಗಿ ಅವಶ್ಯಕವಾದ ಹೆಚ್ಚುವರಿ ಸೌಲಭ್ಯಗಳನ್ನು ಕಲ್ಪಿಸಿರುವ ಮತ್ತು ಅಗತ್ಯ ಬೋಧಕ / ಬೋಧಕೇತರ ಸಿಬ್ಬಂದಿಯನ್ನು ನೇಮಕ ಮಾಡಲಾಗಿರುವ ಬಗ್ಗೆ ವಿವರಗಳನ್ನು ಸಲ್ಲಿಸತಕ್ಕದ್ದು.

(5) ವಿದ್ಯಾರ್ಥಿ ಪ್ರವೇಶವು ವರ್ಷಕ್ಕೊಮ್ಮೆ ಮಾತ್ರ ಇರತಕ್ಕದ್ದು, ಸರ್ಕಾರ ಅನುಮತಿಸಿರುವುದನ್ನು ಮೀರಿ ಅಧಿಕ ಪ್ರವೇಶಾತಿಯನ್ನು ಮಾಡಿಕೊಂಡಲ್ಲಿ ಸರ್ಕಾರದ ಅನುಮತಿ/ ಮಾನ್ಯತೆಯನ್ನು ರದ್ದುಪಡಿಸಲಾಗುವುದು.

(6) ಅಂತರಾಷ್ಟ್ರೀಯ / ಬಹು ಶಿಸ್ತಿನ ಸಂಶೋಧನೆಯನ್ನು ಉತ್ತೇಜಿಸುವುದು.

(7) ವಿದ್ಯಾರ್ಥಿಗಳ ಹಾಸ್ಟೆಲ್‌ಗಳಿಗೆ ಸೂಕ್ತ ಭದ್ರತೆಯನ್ನು ಒದಗಿಸತಕ್ಕದ್ದು.

(8) ಮೇಲ್ಕಂಡ ಹೊಸ ಕೋರ್ಸಿಗೆ ಸಂಬಂಧಿಸಿದಂತೆ ವಿನಿಯಮಗಳನ್ನು ಒಂದು ತಿಂಗಳೊಳಗಾಗಿ ರಚಿಸಿಕೊಂಡು, ಈ ಕುರಿತಾದ ಅನುಪಾಲನಾ ವರದಿಯನ್ನು ವಿನಿಯಮಗಳ ಪ್ರತಿಯೊಂದಿಗೆ ಒಂದು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

(9) ಸದರಿ ಹೊಸ ಕೋರ್ಸಿಗೆ ಸಂಬಂಧಿಸಿದಂತೆ ಪಠ್ಯಕ್ರಮವನ್ನು ಯುಜಿಸಿ ವಿನಿಯಮಗಳಿಗೆ ಅನುಗುಣವಾಗಿ ನಿಗದಿಪಡಿಸಿಕೊಳ್ಳತಕ್ಕದ್ದು ಹಾಗೂ ಈ ಕುರಿತಾದ ಅನುಪಾಲನಾ ವರದಿಯನ್ನು ಒಂದು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

-3

(10) ರಾಜ್ಯ ಸರ್ಕಾರವು ಕಾಲಕಾಲಕ್ಕೆ ನೀಡುವ ಸೂಚನೆ ಹಾಗೂ ಆದೇಶಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.

(11) ಸೂಕ್ತ ಕಾರಣ ನೀಡಿ ಅನುಮೋದನೆಯನ್ನು ಹಿಂಪಡೆಯುವ ಹಕ್ಕನ್ನು ಸರ್ಕಾರ ಕಾಯ್ದಿರಿಸಿಕೊಂಡಿದೆ.

ತಮ್ಮ ನಂಬುಗೆಯ,

(ವೀರಭದ್ರು)
ಸರ್ಕಾರದ ಅಧೀನ ಕಾರ್ಯದರ್ಶಿ
ಉನ್ನತ ಶಿಕ್ಷಣ ಇಲಾಖೆ (ವಿಶ್ವವಿದ್ಯಾಲಯ-2)

ಇವರಿಗೆ:-

1. ಆಯುಕ್ತರು, ಕಾಲೇಜು ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ.
2. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು.
3. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್, ನಂ. 30, ಪ್ರಸನ್ನ ಕುಮಾರ್ ಬ್ಲಾಕ್, ಬೆಂಗಳೂರು ನಗರ ವಿಶ್ವವಿದ್ಯಾಲಯ ಆವರಣ, ವೈ. ರಾಮಚಂದ್ರು ರಸ್ತೆ, ಗಾಂಧಿನಗರ, ಬೆಂಗಳೂರು.
4. ಮಾನ್ಯ ಮುಖ್ಯಮಂತ್ರಿಯವರ ಕಾರ್ಯದರ್ಶಿಗಳ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ.
6. ಇ-ಸಮನ್ವಯಾಧಿಕಾರಿ, (ಜಾಲತಾಣದಲ್ಲಿ ಪ್ರಕಟಿಸಲು).
7. ಅಧೀನ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ (ತಾಂತ್ರಿಕ), ಬಹುಮಹಡಿಗಳ ಕಟ್ಟಡ, ಬೆಂಗಳೂರು.

04/07/2026
4:52 PM